**Code No. 18 Y**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ದ್ವಿತೀಯ ಪತ್ರಿಕೆ

## ವಿಸ್ತರಿಸುವಿಕೆ

ಜುಲೈ, 2015

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಿಸುವಿಕೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ, ಅವುಗಳನ್ನು ಹಾಗೂ ಪ್ರಶ್ನೆ ನಮೂನೆಯನ್ನು ***ಎತ್ತರಿಸಿದ ಧ್ವನಿಯಲ್ಲಿ*** ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ಬೆಂಗಳೂರಿನ ನೆಲಮಂಗಲ ಬಳಿ ಸೇತುವೆ ನಿರ್ಮಾಣಕ್ಕಾಗಿ ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯ ಮೂರು ಮತ್ತು ಮೇಲ್ಪಟ್ಟ

$\frac{1}{4}$ ದರ್ಜೆಯ ಗುತ್ತಿಗೆದಾರರಿಂದ/ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಯ ಬೆಲೆ ಐದು ನೂರು ರೂಪಾಯಿಗಳು, ಕೆಲಸದ ಅಂದಾಜು ವೆಚ್ಚ ಒಂದು ಕೋಟಿ ರೂಪಾಯಿಗಳು, ಕಾಲಮಿತಿ ಒಂದು ವರ್ಷ, ಮುಂಗಡ ಠೇವಣಿ ಎರಡು ಲಕ್ಷ

$\frac{1}{2}$ ರೂಪಾಯಿಗಳು, /ಕೆಲಸದ ವಿವರ, ನಿಯಮ, ಷರತ್ತುಗಳನ್ನು ಎಲ್ಲಾ ಕೆಲಸದ ದಿನಗಳಂದು ಪಡೆಯಬಹುದು. ಮೊಹರಾದ ಟೆಂಡರುಗಳನ್ನು ಜನವರಿ ಮೂವತ್ತರೊಳಗೆ ಅಧೀಕ್ಷಕ ಅಭಿಯಂತರರು, ರಾಷ್ಟ್ರೀಯ/ ಹೆದ್ದಾರಿ ಉಪ $\frac{3}{4}$
ವಿಭಾಗ–ಮೂರು, ಕೃಷ್ಣರಾಜೇಂದ್ರ ವೃತ್ತ, ಬೆಂಗಳೂರು ಇವರಿಗೆ ತಲುಪಬೇಕು.

ಅಧೀಕ್ಷಕ ಅಭಿಯಂತರವರ ಸಹಿಗಾಗಿ

**ಟೆಂಡರು ಪ್ರಕಟಣೆಯನ್ನು ಸಿದ್ಧಪಡಿಸಿ.**

(ಅಂಕಗಳು : 20)

[ Turn over

1 **ಪ್ರಶ್ನೆ ಎರಡು :**X ಶ್ರೀನಿಧಿ ಚರ್ಮದ ಚೀಲಗಳ
ತಯಾರಕರು, ಬೆಂಗಳೂರು, ಇವರು ಸೀಮಾ
ಚರ್ಮದ ಚೀಲಗಳ ವ್ಯಾಪಾರಸ್ಥರು, ಸಯ್ಯಾಜಿರಾವ್
ರಸ್ತೆ, ಮೈಸೂರು, ಇವರಿಗೆ ಬರೆದ ಪತ್ರ. ನೀವು
$\frac{1}{4}$ ಕೇಳಿರುವ ಚರ್ಮದ/ ಚೀಲಗಳನ್ನು ನಿಮ್ಮ
ವಿಳಾಸಕ್ಕೆ ಆದಷ್ಟು ಬೇಗೆ ಕಳುಹಿಸಿಕೊಡುತ್ತೇವೆ.
ಈಗಾಗಲೇ ನಮ್ಮಲ್ಲಿ ದಾಸ್ತಾನಿರುವ ಚೀಲಗಳನ್ನು
ಸದ್ಯದಲ್ಲಿ ನಿಮಗೆ ತಲುಪಿಸುವ ವ್ಯವಸ್ಥೆ
$\frac{1}{2}$ ಮಾಡುತ್ತೇವೆ. ಉಳಿದ/ ಚೀಲಗಳನ್ನು ಆದಷ್ಟು
ಶೀಘ್ರದಲ್ಲಿ ನಿಮಗೆ ಸರಬರಾಜು ಮಾಡುತ್ತೇವೆ.

ಒಟ್ಟಿಗೆ ಸರಬರಾಜು ಆದೇಶ ನೀಡಿದರೆ
ಶೇಕಡ ಇಪ್ಪತ್ತೈದರಷ್ಟು ರಿಯಾಯಿತಿಯನ್ನು
$\frac{3}{4}$ ಬಿಟ್ಟು ಕೊಡುತ್ತೇವೆ. ದಾಸ್ತಾನಿನಲ್ಲಿ ಯಾವುದೇ/
ಲೋಪದೋಷಗಳು ಕಂಡುಬಂದಲ್ಲಿ ಕೂಡಲೇ
ನಮಗೆ ತಿಳಿಸಿ, ಬೇರೆ ಚೀಲಗಳನ್ನು ತಲುಪಿಸುವ
ವ್ಯವಸ್ಥೆ ಮಾಡುತ್ತೇವೆಂದು ತಿಳಿಸುತ್ತಾ
ವ್ಯವಸ್ಥಾಪಕರ ಸಹಿಗಾಗಿ **ವಾಣಿಜ್ಯ ಪತ್ರ**
2 **ತಯಾರಿಸಿ.**X (ಅಂಕಗಳು : 20)

**ಪ್ರಶ್ನೆ ಮೂರು :** ಕನ್ನಡ ಚಿತ್ರರಂಗದ ಮೇರುನಟ
ಪದ್ಮಭೂಷಣ ಡಾ. ರಾಜಕುಮಾರ್‌ರವರ
ಸ್ಮಾರಕವನ್ನು ಸಿದ್ಧಗೊಳಿಸಿ ಎರಡು ಸಾವಿರದ
ಹದಿನಾಲ್ಕನೇ ಇಸವಿ ನವೆಂಬರ್
ಇಪ್ಪತ್ತೊಂಭತ್ತನೇ/ ದಿನಾಂಕದಂದೆ $\frac{1}{4}$
ಲೋಕಾರ್ಪಣೆ ಮಾಡಲಾಯಿತು. ಕರ್ನಾಟಕ
ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು,
ಮುಖ್ಯ ಅತಿಥಿಗಳು ವಾರ್ತಾ ಸಚಿವರಾದ
ಶ್ರೀ ರೋಷನ್ ಬೇಗ್,/ ಅಧ್ಯಕ್ಷತೆ ಕನ್ನಡ $\frac{1}{2}$
ಮತ್ತು ಸಂಸ್ಕೃತಿ ಸಚಿವೆಯಾದ ಶ್ರೀಮತಿ
ಉಮಾಶ್ರೀ. ವಿಶೇಷ ಅತಿಥಿಯಾಗಿ ವಸತಿ
ಸಚಿವರಾದ ಶ್ರೀ ಅಂಬರೀಷ್ ಹಾಗೂ
ಸುಪ್ರಸಿದ್ಧ ನಟರುಗಳಾದ ಶ್ರೀ ರಜನಿಕಾಂತ್,/ $\frac{3}{4}$
ಜಿರಂಜೀವಿ ಮತ್ತು ಡಾ. ರಾಜ್ ಕುಟುಂಬದ
ಸದಸ್ಯರು ಭಾಗವಹಿಸಲಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ
ನಿರ್ದೇಶಕರು ಸಿದ್ಧಪಡಿಸಿದಂತೆ **ಆಹ್ವಾನ**
**ಪತ್ರಿಕೆಯನ್ನು ತಯಾರಿಸಿ.**X (ಅಂಕಗಳು : 20) 3

**ಪ್ರಶ್ನೆ ನಾಲ್ಕು :** ಎರಡು ಸಾವಿರದ ಹತ್ತನೇ
ಇಸವಿಯಲ್ಲಿ ನಡೆದ ಬೃಹತ್ ಬೆಂಗಳೂರು
ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ
ಬೆಂಗಳೂರಿನ ಕೆಂಪೇಗೌಡ ವಾರ್ಡ್‌ನ
ಭಾರತೀಯ ಜನತಾ ಪಕ್ಷದ/ ಅಭ್ಯರ್ಥಿಯಾಗಿ $\frac{1}{4}$
ಸ್ಪರ್ಧಿಸಲಿರುವ ನೀವು ಬೆಂಗಳೂರಿನ ಸಮಸ್ತ
ಅಭಿವೃದ್ಧಿಗೆ ನಿರಂತರ ಶ್ರಮಿಸುವುದಾಗಿ, ಸ್ವಚ್ಛ

ಬೆಂಗಳೂರನ್ನು ನಿರ್ಮಿಸಲು ಪಣ
ತೊಡುವುದಾಗಿ ಮತದಾರರಿಗೆ ಆಶ್ವಾಸನೆ
$\frac{1}{2}$ ನೀಡುತ್ತಾ./ ಬೆಂಗಳೂರಿನ ಕಸ ವಿಲೇವಾರಿ
ಸಮಸ್ಯೆಗೆ ಒಂದು ಶಾಶ್ವತ ಪರಿಹಾರ ಕಂಡುಹಿಡಿದು
ಬೆಂಗಳೂರಿನ ಕಸ ವಿಲೇವಾರಿಯನ್ನು
ಸಮರ್ಪಕವಾಗಿ ನಿಭಾಯಿಸುವಲ್ಲಿ ಶ್ರಮಿಸುವುದಾಗಿ
$\frac{3}{4}$ ಮತದಾರರಿಗೆ/ ಭರವಸೆಯನ್ನು ನೀಡುತ್ತಾ, ಮತ
ಯಾಚಿಸಿರಿ.

ಮೇಲ್ಕಂಡ ಅಂಶಗಳನ್ನು ಒಳಗೊಂಡಂತೆ **ಚುನಾವಣಾ ಪ್ರಣಾಳಿಕೆ ತಯಾರಿಸಿ.**

(ಅಂಕಗಳು : 20)

***ಪ್ರಶ್ನೆ ಐದು :*** ಆಸ್ಟ್ರೇಲಿಯಾದ ಆರಂಭಿಕ ಕ್ರಿಕೆಟ್
4 ಆಟಗಾರ ಶ್ರೀ ಫಿಲ್ ಹ್ಯೂಸ್Xರವರು
ಇತ್ತೀಚೆಗೆ ನಿಧನರಾಗಿರುತ್ತಾರೆ. ಕೃಷಿಕ
ಕುಟುಂಬದಲ್ಲಿ ಹುಟ್ಟಿದ ಹ್ಯೂಸ್ ಇಪ್ಪತ್ತನೇ
ವಯಸ್ಸಿಗೆ ಟೆಸ್ಟ್ ಕ್ರಿಕೆಟ್ ಆಡಿದ್ದಾರೆ, ಏಕದಿನ
ಕ್ರಿಕೆಟ್‌ನಲ್ಲೂ ಉತ್ತಮ ಸಾಧನೆ ಮಾಡಿದ್ದಾರೆ./ $\frac{1}{4}$
ಭಾರತ ತಂಡದೊಂದಿಗೆ ನಡೆಯಲಿರುವ ಟೆಸ್ಟ್
ಸರಣಿಗೆ ಆಯ್ಕೆಯಾಗಿ ಆಸ್ಟ್ರೇಲಿಯಾ ತಂಡದಲ್ಲಿ
ಆಡುತ್ತಿದ್ದರು. ದೇಶೀಯ ಪಂದ್ಯದಲ್ಲಿ ಬ್ಯಾಟ್
ಮಾಡುತ್ತಿದ್ದಾಗ ಬೌನ್ಸರ್ ಕುತ್ತಿಗೆಗೆ ಬಡಿದು
ಅಂಗಳದಲ್ಲೇ/ ಕುಸಿದು ಬಿದ್ದು ಕೊನೆಯುಸಿರೆಳಿ $\frac{1}{2}$
ದಿದ್ದಾರೆ. ಅವರ ನಿಧನದಿಂದಾಗಿ ಆಸ್ಟ್ರೇಲಿಯಾ
ಕ್ರಿಕೆಟ್ ತಂಡ ಒಬ್ಬ ಉತ್ತಮ ಆಟಗಾರನನ್ನು
ಕಳೆದುಕೊಂಡಿದೆ.

ಅವರ ನಿಧನದ ದುಃಖವನ್ನು ಭರಿಸುವ/ $\frac{3}{4}$
ಶಕ್ತಿಯನ್ನು ಅವರ ತಂದೆ–ತಾಯಿಯವರಿಗೆ
ಭಗವಂತನು ನೀಡಲೆಂದು ಪ್ರಾರ್ಥಿಸಿ ಕರ್ನಾಟ
ರಾಜ್ಯದ ಮಾನ್ಯ ಮುಖ್ಯಮಂತ್ರಿಯವರು
ಬರೆದಂತೆ **ಸಂತಾಪ ಸೂಚಕ ಸಂದೇಶವನ್ನು
ಸಿದ್ಧಪಡಿಸಿ.**X (ಅಂಕಗಳು : 20) 5